ಇ) ಹೌದು

ಈ) ಈ ರಸ್ತೆಯಲ್ಲಿ ಉಂಟಾಗಿರುವ ಗುಂಡಿ ಹಾಗೂ ತಗ್ಗುಗಳನ್ನು ಶೀಘ್ರವಾಗಿ ತುಂಬಿ, ರಸ್ತೆಯನ್ನು ಲಭ್ಯವಿರುವ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚನೆಗಳನ್ನು ನೀಡಲಾಗಿದೆ.

ದ.ಕನ್ನಡ ಜಿಲ್ಲೆಯ ವಿಧವಾವೇತನ ವೃದ್ಧಾಪ್ಯವೇತನ ಕುರಿತು

2135 - ಶ್ರೀ ಕೆ. ಜಯರಾಂ ಶೆಟ್ಟಿ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಧವಾ ವೇತನ, ಅಂಗವಿಕಲ ವೇತನ, ವೃದ್ಧಾಪ್ಯ ವೇತನ ಪಡೆಯುವವರ ಸಂಖ್ಯೆ ಎಷ್ಟು? ಎಷ್ಟೆಷ್ಟು ವೇತನ ಪಡೆಯುತ್ತಾರೆ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಂಖ್ಯೆ ಎಷ್ಟು ಮತ್ತು ಅವರಿಗೆ ವರ್ಷಕ್ಕೆ ಎಷ್ಟು ಮೊತ್ತ ಬಿಡುಗಡೆಯಾಗುತ್ತದೆ?

ಇ) ಕಳೆದ ಆರು ತಿಂಗಳಿಂದ ಜಿಲ್ಲೆಯಲ್ಲಿ ಯಾರಿಗೂ ಯಾವುದೇ ತರಹದ ವೇತನದ ಮೊತ್ತ ಬಿಡುಗಡೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ವಿಧವಾ ವೇತನ ಅಂಗವಿಕಲ ವೇತನ, ವೃದ್ಧಾಪ್ಯ ವೇತನ ಪಡೆಯುವವರ ಸಂಖ್ಯೆ ಈ ಕೆಳಕಂಡಂತಿದೆ.

ವೃದ್ಧಾಪ್ಯ ವೇತನ	4,91,551
ಅಂಗವಿಕಲ ವೇತನ	2,87,412
ವಿಧವಾ ವೇತನ	4,82,954

ಆ) ಈ ಎಲ್ಲಾ ಪಿಂಚಣಿದಾರರಿಗೂ ಪ್ರತಿ ಮಾಹೆಯ 75 ರೂಪಾಯಿಗಳಂತೆ ವೇತನವನ್ನು ಪಾವತಿಸಲಾಗುತ್ತಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವವರ ಸಂಖ್ಯೆ ಈ ಕೆಳಕಂಡಂತಿದೆ

ವೃದ್ಧಾಪ್ಯ ವೇತನ ಸಂಖ್ಯೆ	15099
ಅಂಗವಿಕಲ ವೇತನ ಸಂಖ್ಯೆ	15733
ವಿಧವಾ ವೇತನ ಸಂಖ್ಯೆ	34242
ಒಟ್ಟು	65074

ಇ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು, ಬಾಕಿ ಹಣ ಬಿಡುಗಡೆ ಮಾಡಲು ಈಗಾಗಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ದ.ಕನ್ನಡ ಜಿಲ್ಲೆಯಲ್ಲಿ ಸುಂಟರಗಾಳಿಯಿಂದ ಆದ ಅನಾಹುತ

2052 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಜುಲೈ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದ ಭೀಕರ ಸುಂಟರಗಾಳಿಯಿಂದ ಆದ ಅನಾಹುತಗಳಿಂದ ಮನೆ ಕಳೆದುಕೊಂಡವರ ಸಂಖ್ಯೆ ಎಷ್ಟು ?

ಆ) ಎಷ್ಟು ಜನರಿಗೆ ಇದರಿಂದಾಗಿ ತೊಂದರೆಯಾಗಿದೆ (ಅಂಕಿ-ಅಂಶಗಳೊಂದಿಗೆ) ಮತ್ತು ಒಟ್ಟು ನಷ್ಟ ಎಷ್ಟು ?

ಇ) ಸರ್ಕಾರ ಈ ಜನರಿಗೆ ಪುನರ್‌ವಸತಿ ಅಥವಾ ವ್ಯವಸ್ಥೆಗೋಸ್ಕರ ಎಷ್ಟು ಜನರಿಗೆ ಎಷ್ಟೆಷ್ಟು ಪರಿಹಾರದ ಮೊತ್ತ ಒದಗಿಸಿದೆ ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 313 ಮನೆಗಳು ಭಾಗಶಃ ಮತ್ತು 8 ಮನೆಗಳು ಪೂರ್ಣವಾಗಿ, ಹೀಗೆ ಒಟ್ಟು 321 ಮನೆಗಳು ಹಾನಿಗೊಂಡಿದೆ.

ಆ) 331 ಕುಟುಂಬಗಳಿಗೆ ತೊಂದರೆಯಾಗಿದೆ. ಹಾನಿಯ ವಿವರ ಕೆಳಕಂಡಂತಿದೆ

(ರೂ. ಲಕ್ಷಗಳಲ್ಲಿ)

			ಲುಕ್ಸಾನು
1.	ಪೂರ್ಣ ಮನೆ ಹಾನಿ	-8	2.70
2.	ಭಾಗಶಃ ಮನೆ ಹಾನಿ	313	16.65
3.	ಜಾನುವಾರು ಪಟ್ಟಿಹಾನಿ	9	0.37
4.	ನೀರಾವರಿ ಪಂಪ್‌ಸೆಟ್ ಹಾನಿ	1	0.02
	ಒಟ್ಟು	331	19.74

ಇ) ನಿಯಮಾನುಸಾರ ಈವರೆಗೆ 242 ಜನರಿಗೆ ರೂ. 4,64,354.00ಗಳ ಪರಿಹಾರವನ್ನು ನೀಡಲಾಗಿದೆ. ಅಲ್ಲದೇ, ಸುಂಟರಗಾಳಿಯಿಂದ ಹೆಚ್ಚಿನವು ಹೆಂಚು ಹಾರಿ ಹೋಗಿರುವ ಪ್ರಕರಣಗಳಾಗಿದ್ದು, 28,200 ಹೆಂಚುಗಳನ್ನು ಸಂತ್ರಸ್ಥರ ಮನೆಗಳಿಗೆ ತಲುಪಿಸಿ, ಸರ್ಕಾರದಿಂದ ಹೆಂಚು ಹೊದಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಬಸ್ಸಿನ ಬಾಡಿ ಕಟ್ಟುವುದರ ಬಗ್ಗೆ

2323 - ಡಾ|| ಎಂ.ಪಿ. ಕರ್ಕಿ (ಕುಮಟ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರ ಖರೀದಿಸಲು ನಿಶ್ಚಯಿಸಿದ 1500 ಬಸ್ ಛಾಸಿಗಳಲ್ಲಿ ಎಷ್ಟು ಛಾಸಿಗಳನ್ನು ಕಳೆದ 9 ತಿಂಗಳಲ್ಲಿ ಖರೀದಿಸಿದೆ ?

ಆ) ಎಷ್ಟು ಛಾಸಿಗಳಿಗೆ ಬಾಡಿ ಕಟ್ಟಿ ಯಾವ ಡಿವಿಶನ್‌ಗಳಿಗೆ ಕಳಿಸಿದೆ, ಇವುಗಳಲ್ಲಿ ಸಾಧಾ ಅರೆಸುಖಾಸೀನ, ಸುಖಾಸೀನ, ಅತ್ಯಂತ ಸುಖಾಸೀನ ಬಸ್ಸುಗಳ ಸಂಖ್ಯೆ ಎಷ್ಟು, (ವಿವರ ಒದಗಿಸುವುದು)

ಇ) ಉತ್ತರ ಕನ್ನಡ ಸಿರ್ಸಿ ಡಿವಿಶನ್‌ನಲ್ಲಿ ಯಾವ ವಿಧದ ಬಸ್ಸುಗಳಿಗೆ ಎಷ್ಟು ಬೇಡಿಕೆಗಳಿವೆ ?

ಈ) ಸಿರ್ಸಿ ಡಿವಿಶನ್‌ನಲ್ಲಿ 8 ಲಕ್ಷಕ್ಕೂ ಹೆಚ್ಚು ಕಿ.ಮೀ. ಸಂಚರಿಸಿದ ಬಸ್ಸುಗಳ ವಿವರ ಒದಗಿಸುವುದು ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :